(10)

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

Mounesh Kammar

ಸಂಖ್ಯೆ : ಸಿ3(5)/ಪ್ರಾ.ಶಿ.ಇತರೆ/01/2016-17 ದಿನಾಂಕ : 11.09.2018.

ಜ್ಞಾಪನಾ

ಗದಗ ಜಿಲ್ಲಾ ಪಂಚಾಯಿತಿ
ಉಪ-ನಿರ್ದೇಶಕರ ಕಛೇರಿ, ಗದಗ
ಶಾಖೆ 81, 82, 83
ವಿಭಾಗ
ಸಂಖ್ಯೆ 16317 40
ದಿನಾಂಕ 4-10-18
ಸಾರ್ವಜನಿಕ ಶಿಕ್ಷಣ ಇಲಾಖೆ

ವಿಷಯ: ಮಾನ್ಯತೆ ಪಡೆದಿರುವ ಸಂಘದ ಪದಾಧಿಕಾರಿಗಳನ್ನು ಮಾತ್ರ ಇಲಾಖಾ ಕಾರ್ಯಕ್ರಮಗಳಿಗೆ ಆಹ್ವಾನಿಸುವ ಬಗ್ಗೆ

ಉಲ್ಲೇಖ: 1) ಆಸಕ್ತ ಕ್ರಿಯಾಶೀಲ ವೃಂದ ಎಂಬ ಹೆಸರಿನಲ್ಲಿ ಸಲ್ಲಿಸಿರುವ ಮನವಿ (ದಿ: 23.07.2018 ರಂದು ಸ್ವೀಕೃತಗೊಂಡಿದೆ)

2) ವಿವಿಧ ದಿನಾಂಕಗಳಲ್ಲಿ ಸರ್ಕಾರದಿಂದ ಹಾಗೂ ಇಲಾಖೆಯಿಂದ ನೀಡಿರುವ ಸುತ್ತೋಲೆ

* * * * *

ವಿಷಯದನ್ವಯ, ಆಸಕ್ತ ಸಾರ್ವಜನಿಕ ವಲಯದಿಂದ ಮನವಿಗಳು ಸಲ್ಲಿಕೆಯಾಗಿದ್ದು, ಮಾನ್ಯತೆ ಹೊಂದದೆ ಇರುವ ಸಂಘದ ಪ್ರತಿನಿಧಿಗಳು ಸಹ ಇಲಾಖಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಅನಗತ್ಯವಾಗಿ ಗೊಂದಲ ಉಂಟಾಗುತ್ತಿದೆ ಮತ್ತು ಶಾಲೆಗಳಿಂದ ಅಂತಹ ಶಿಕ್ಷಕರು ಗೈರು ಹಾಜರಾಗುತ್ತಿರುವುದರಿಂದ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಉಂಟಾಗುತ್ತಿದೆ ಎಂಬುದಾಗಿ ಆಕ್ಷೇಪಣೆಗಳು ವ್ಯಕ್ತವಾಗಿವೆ. ಈಗಾಗಲೇ ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಸ್ಪಷ್ಟವಾದ ಸೂಚನೆಗಳನ್ನು ಹಲವು ಸಂದರ್ಭಗಳಲ್ಲಿ ನೀಡಲಾಗಿದೆ ಮತ್ತು ಸರ್ಕಾರದ ಆದೇಶ ಮತ್ತು ಇಲಾಖಾ ಸುತ್ತೋಲೆಗಳನ್ನು ಗಮನಿಸಿ ಮಾನ್ಯತೆ ಇರುವ ಮತ್ತು ಸರ್ಕಾರದಿಂದ ಆದೇಶವಾಗಿರುವ ಸಂಘ ಸಂಸ್ಥೆಗಳ ಪ್ರತಿನಿಧಿಗಳಿಗೆ ಮಾತ್ರ ಇಲಾಖಾ ಸಭೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕಾಗಿದೆ. ಇತರೆ ಶಿಕ್ಷಕರುಗಳಿಗೆ ಆಹ್ವಾನವನ್ನು ನೀಡಿ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಆಯಾ ಉಪನಿರ್ದೇಶಕರುಗಳೇ ನೇರ ಜವಾಬ್ದಾರರಾಗುತ್ತಾರೆ ಎಂಬುದನ್ನು ಕಟ್ಟುನಿಟ್ಟಾಗಿ ಸೂಚಿಸಿದೆ. ಮುಂದುವರಿದು ಶಾಲಾ ಅವಧಿಯಲ್ಲಿ ಬೋಧನೆಗೆ ತೊಂದರೆಯಾಗದಂತೆಯೂ ಎಚ್ಚರಿಕೆ ವಹಿಸುವುದು. ಈ ಬಗ್ಗೆ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳಿಗೂ ಅಗತ್ಯ ಆದೇಶಗಳನ್ನು ಹೊರಡಿಸಿ ಕ್ರಮಕೈಗೊಳ್ಳತಕ್ಕದ್ದು .

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಗೆ,

ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ

kpeta.weebly.com